## NOVEMBER 25, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳಿಗೆ, ಕೇಂದ್ರದ ಅಧಿಸೂಚನೆ; ವಿವಿಧ ವಲಯಗಳ ಕಾರ್ಮಿಕರ ಹಿತ ಕಾಯಲು, ಮಹತ್ವದ ಹೆಜ್ಜೆ.**

**'ಒಂದು ರಾಷ್ಟ್ರ, ಒಂದು ಚುನಾವಣೆ'; ಗದಗ ನಲ್ಲಿ, ವಿಶೇಷ ವಿಚಾರ ಸಂಕಿರಣ, ಸಂಪನ್ನ.**

**ಸ್ಥಳೀಯ ಆರ್ಥಿಕತೆ ವೇಗವರ್ಧನೆಗೆ, ಲೀಪ್ ಯೋಜನೆ; ಕಲಬುರಗಿಯಲ್ಲಿ ನೂತನ ನವೋದ್ಯಮ ಕೇಂದ್ರ, ಜನೆವರಿಗೆ ಕಾರ್ಯಾರಂಭ.**

**ಮಹಿಳೆಯರ ವಿರುದ್ಧದ ದೌರ್ಜನ್ಯ ತಡೆ, ಅಂತಾರಾಷ್ಟ್ರೀಯ ದಿನಾಚರಣೆ; ಇಂದು ವಿವಿಧೆಡೆ, ಅರ್ಥಪೂರ್ಣ ಕಾರ್ಯಕ್ರಮ.**

<><><>

**ಈಗ ವಾರ್ತೆಗಳ ವಿವರ**

<><><>

**ಕೇಂದ್ರ ಸರ್ಕಾರ, ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳನ್ನು, ಅಧಿಸೂಚನೆ ಮೂಲಕ ಜಾರಿಗೊಳಿಸಿದೆ. ಹಲವು ದಶಕಗಳಿಂದ ಅಸ್ತಿತ್ವದಲ್ಲಿದ್ದ, 29 ವಿಭಿನ್ನ ಕಾರ್ಮಿಕ ಕಾನೂನುಗಳನ್ನು, ರದ್ದು ಪಡಿಸಿದೆ. ನೂತನ ಕಾರ್ಮಿಕ ಕಾನೂನುಗಳಿಂದ, ಕಾರ್ಮಿಕರಿಗಿರುವ ಪ್ರಯೋಜನಗಳ ಕುರಿತು, ಮಾಹಿತಿ ನೀಡಿದ್ದಾರೆ, ಬೆಳಗಾವಿ ಪ್ರಾದೇಶಿಕ ಕಾರ್ಮಿಕ ಉಪ ಆಯುಕ್ತ ಡಿ.ಜಿ. ನಾಗೇಶ.**

<><><>

**ಡಿ.ಜಿ. ನಾಗೇಶ ಧ್ವನಿ –46 ಸೆಕೆಂದುಗಳು**

<><><>

ಚುನಾವಣೆ, ಮತದಾನ ವ್ಯವಸ್ಥೆ ಸುಧಾರಣೆ ಹಾಗೂ ದೇಶದ ಆರ್ಥಿಕ ಭದ್ರತೆಗೆ, ‘ಒಂದು ರಾಷ್ಟ್ರ, ಒಂದು ಚುನಾವಣೆ’ ಜಾರಿಗೊಳ್ಳುವುದು ಅವಶ್ಯ ಎಂದು, ವಿಧಾನಪರಿ  ’ತ್ ಶಾಸಕ ಕೆ.ಎಸ್. ನವೀನ, ಅಭಿಪ್ರಾಯಪಟ್ಟಿದ್ದಾರೆ. ಗದುಗಿನ, ಕೆ.ಎಲ್.ಇ ಶಿಕ್ಷಣ ಸಂಸ್ಥೆಯ, ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದಲ್ಲಿ, ‘ಒಂದು ರಾಷ್ಟ್ರ, ಒಂದು ಚುನಾವಣೆ’ ವಿಚಾರ ಸಂಕಿರಣದಲ್ಲಿ, ಅವರು ಮಾತನಾಡಿದರು. 1952 ರಿಂದ 1967 ರ ವರೆಗೆ, ದೇಶದಲ್ಲಿ ಏಕಕಾಲಕ್ಕೆ ಚುನಾವಣೆಗಳು ನಡೆದಿವೆ ಎಂದರು.

<><><>

ಸ್ಥಳೀಯ ಆರ್ಥಿಕತೆಯ, ವೇಗವರ್ಧನೆ ಕಾರ್ಯಕ್ರಮ ‘ಲೀಪ್’ ಯೋಜನೆಯಡಿ, ಕಲಬುರಗಿಯಲ್ಲಿ, ಹೊಸ ಉದ್ಯಮಶೀಲತೆ ಕೇಂದ್ರ  ಶೀಘ್ರ ಕಾರ್ಯಾರಂಭಿಸಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದ, 7 ಜಿಲ್ಲೆಗಳಲ್ಲಿ, ಕೃಷಿ–ತಂತ್ರಜ್ಞಾನ, ಗ್ರಾಮೀಣ ಕರಕುಶಲತೆ ಹಾಗೂ ಯುವಜನತೆಯಲ್ಲಿ, ಉದ್ಯಮಶೀಲತೆ ಪ್ರೋತ್ಸಾಹಿಸಲು, 15 ಸಾವಿರ ಚದರ ಅಡಿ ವಿಸ್ತೀರ್ಣದ, ಹೊಸ ನವೋದ್ಯಮ ಕೇಂದ್ರ ಹಾಗೂ ಮಾದರಿ ಪ್ರಾಥಮಿಕ ಪ್ರಯೋಗಾಲಯ ಸ್ಥಾಪನೆಯಾಗಲಿದೆ. 2026ರ ಜನೆವರಿಯಲ್ಲಿ ಕಾರ್ಯಾರಂಭಿಸಲಿದೆ ಎಂದು, ಸಚಿವ ಸಚಿವರು ಹೇಳಿದ್ದಾರೆ.

<><><>

ಕೇಂದ್ರ ಪುರಸ್ಕೃತ, ಕುಸುಮ–ಬಿ ಯೋಜನೆಯಡಿ, ಸೌರ ವಿದ್ಯುತ್ ಚಾಲಿತ, ಪಂಪ್ ಸೆಟ್‌ಗಳನ್ನು, ಹೊಲದಲ್ಲಿ ರೈತರು ಅಳವಡಿಸಲು, ಪ್ರೋತ್ಸಾಹಿಸುವಂತೆ, ಇಂಧನ ಖಾತೆ ಸಚಿವ ಕೆ.ಜೆ. ಜಾರ್ಜ್, ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಯಾದಗಿರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಹಾಗೂ ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಪ್ರಗತಿ ಪರಿಶೀಲಿಸಿ, ಮಾತನಾಡಿದರು. ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆ ಬಾವಿಗಳಿಗೆ, ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ, ಸೂಚಿಸಿದರು.

<><><>

ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, 14ನೇ ಘಟಿಕೋತ್ಸವ, ಬೆಳಗಾವಿ ಸುವರ್ಣಸೌಧದಲ್ಲಿ,  ಇಂದು ಬೆಳಗ್ಗೆ 11.30ಕ್ಕೆ ಜರುಗಲಿದೆ. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಪಾಲ್ಗೊಂಡು, ಪರಿಸರವಾದಿ ಶಿವಾಜಿ ಕಾಗಣೇಕರ, ಸಮಾಜಸೇವಕರಾದ ಸುರೇಂದ್ರ ದೊಡ್ಡಣ್ಣವರ, ಬಸವರಾಜ ಯಲಿಗಾರ ಅವರಿಗೆ, ಗೌರವ ಡಾಕ್ಟರೇಟ್ ಪ್ರದಾನಿಸಲಿದ್ದಾರೆ ಎಂದು, ವಿಶ್ವವಿದ್ಯಾಲಯದ ಉಪ ಕುಲಪತಿ ಸಿ.ಎಂ ತ್ಯಾಗರಾಜ ತಿಳಿಸಿದ್ದಾರೆ.

<><><>

ಭಾರತ ಸ್ಕೌಟ್ಸ್ ಆಂಡ್ ಗೈಡ್ಸ್, ರಾಷ್ಟ್ರೀಯ ಸಿಲ್ವರ್ ಸ್ಟಾರ್ ಪ್ರಶಸ್ತಿಗೆ, ಸ್ಕೌಟ್ಸ್ ಆಂಡ್ ಗೈಡ್ಸ್ ರಾಜ್ಯ ಉಪಾಧ್ಯಕ್ಷ, ಚಿಕ್ಕಮಗಳೂರಿನ ಎ.ಎನ್ ಮಹೇಶ ಭಾಜನರಾಗಿದ್ದಾರೆ.

ಉತ್ತರಪ್ರದೇಶದ ಲಖನೌ ರಾಜ ಭವನದಲ್ಲಿ ನಾಳೆ, ರಾಜ್ಯಪಾಲರಾದ ಆನಂದಿಬೆನ್ ಪಟೇಲ ಅವರು, ರಾಷ್ಟ್ರೀಯ ಪುರಸ್ಕಾರ ಪ್ರದಾನಿಸಿ, ಗೌರವಿಸಲಿದ್ದಾರೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು.

**(53 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

‘ಹೆಣ್ಣುಮಕ್ಕಳ ವಿರುದ್ಧದ ಡಿಜಿಟಲ್ ಕ್ರೌರ್ಯ ತಡೆಯಲು ಒಂದುಗೂಡಿ’ ಎಂಬ ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಮಹಿಳಾ ದೌರ್ಜನ್ಯ ತಡೆ ದಿನವನ್ನು, ಇಂದು ಆಚರಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಮಹಿಳಾ ಸಂಘಟನೆಗಳು, ನಾಗರಿಕ ಸೇವಾ ಸಂಸ್ಥೆಗಳು, ಸರ್ಕಾರಿ ಸಂಘ ಸಂಸ್ಥೆಗಳ ಸಹಯೋಗದಲ್ಲಿ, ಮಹಿಳೆಯರ ಘನತೆ, ಗೌರವಗಳನ್ನು ರಕ್ಷಿಸಲು, ಜನ ಜಾಗೃತಿ ಮೂಡಿಸುವ ವಿವಿಧ ಅಭಿಯಾನಗಳನ್ನು, ರಾಜ್ಯಾದ್ಯಂತ ಆಯೋಜಿಸಿವೆ. ಮಹಿಳೆಯರ ಹಕ್ಕುಗಳ ರಕ್ಷಣೆ, ಲಿಂಗ ಸಮಾನತೆ ಹಾಗೂ ಸಮಾಜಿಕ, ಡಿಜಿಟಲ್ ಸವಾಲುಗಳನ್ನು ಎದುರಿಸಲು, ಸ್ತ್ರೀ ಸಬಲೀಕರಣದ ಪಣ ತೊಡಲಾಗಿದೆ. ಹಲವು ಕಾನೂನುಗಳನ್ನು, ಮಹಿಳೆಯರ ಹಿತದೃಷ್ಟಿಯಿಂದ, ಅನುಷ್ಠಾನ ಗೊಳಿಸಲಾಗಿದೆ.

<><><>

ಸ್ವತಂತ್ರ ಭಾರತದ, ಪ್ರಥಮ ಗೃಹ ಖಾತೆ ಸಚಿವ ಹಾಗೂ ಉಪ ಪ್ರಧಾನಮಂತ್ರಿ ಸರ್ದಾರ ವಲ್ಲಭ ಭಾಯಿ ಪಟೇಲರ, 150ನೇ ಜಯಂತ್ಯುತ್ಸವದ ಅಂಗವಾಗಿ, ಕಲಬುರಗಿಯಲ್ಲಿ ಏಕತಾ ಪಾದಯಾತ್ರೆ, ಜನ ಸಹಭಾಗಿತ್ವದಲ್ಲಿ ಜರುಗಿತು. ವಿಧಾನಪರಿ ‘ತ್ ಶಾಸಕ ಶಶೀಲ್ ನಮೋಶಿ, ಸರ್ದಾರ ಪಟೇಲರ ಭಾವಚಿತ್ರಕ್ಕೆ ಗೌರವ ಅರ್ಪಿಸಿ, ಚಾಲನೆ ನೀಡಿದರು.

<><><>

ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಕೋಲಾರದಲ್ಲಿ ಸರ್ದಾರ ವಲ್ಲಭ ಭಾಯಿ ಪಟೇಲರ, 150ನೇ ಜನ್ಮದಿನದ ಹಿನ್ನೆಲೆ ಆಯೋಜಿಸಿದ್ದ, ಏಕತಾ ನಡಿಗೆಯಲ್ಲಿ, ಸಹಸ್ರಾರು ನಾಗರಿಕರು, ವಿವಿಧ ಸಂಘಟನೆಗಳ ಸ್ವಯಂಸೇವಕರು, ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡು, ಉಕ್ಕಿನ ಮನುಷ್ಯ, ಸರ್ದಾರ ಪಟೇಲರಿಗೆ, ಶ್ರದ್ಧಾ ಸುಮನ ಸಮರ್ಪಿಸಿದರು. ಕೋಲಾರ ಸಂಸದ ಎಂ.ಮಲ್ಲೇಶ ಬಾಬು, ಏಕತಾ ಪಾದಯಾತ್ರೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸರ್ದಾರ ವಲ್ಲಭ ಭಾಯಿ ಪಟೇಲರ ಕೊಡುಗೆಗಳನ್ನು ಸ್ಮರಿಸಿ, 2047ರ, ವಿಕಸಿತ ಭಾರತ ನಿರ್ಮಾಣದ ಗುರಿ ಸಾಧನೆಗೆ, ಏಕತಾ ನಡಿಗೆ, ಏಕತಾ ಓಟಗಳನ್ನು ದೇಶಾದ್ಯಂತ ಆಯೋಜಿಸಲಾಗಿದೆ, ಎಂದರು.

<><><>

ಗೋವಾದಲ್ಲಿ, ಕಳೆದ 22ನೇ ತಾರೀಖಿನಿಂದ, 56ನೇ ಅಂತಾರಾಷ್ಟ್ರೀಯ ಭಾರತೀಯ ಚಲನಚಿತ್ರೋತ್ಸವ ಆರಂಭವಾಗಿದೆ. 28ರ ವರೆಗೆ ನಡೆಯಲಿದೆ. ಭಾರತೀಯ ಸಿನೆಮಾ ‘ಪನೋರಮ’ ವಿಭಾಗದಡಿ, ದೇವೇಂದ್ರ ಬಡಿಗೇರ ನಿರ್ದೇಶನದ, ಕನ್ನಡ ಸಿನೆಮಾ ವನ್ಯ, ಇಂದು ಪ್ರದರ್ಶನಗೊಳ್ಳಲಿದೆ. ಪ್ರಕಾಶ ತೂಮಿನಾಡು ನಿರ್ದೇಶಿಸಿದ ‘ಸು ಫ್ರಂ ಸೋ’, ನಿರ್ದೇಶಕ ಅಗ್ನಿ ಅವರ ‘ರುಧಿರ್ವನ’ ಕನ್ನಡ ಸಿನೆಮಾ ಸೇರಿದಂತೆ, ಏಕೈಕ ತುಳು ಸಿನೆಮಾ ‘ಇಂಬು’ ಪ್ರದರ್ಶನಗೊಳ್ಳುತ್ತಿವೆ. ‘ವನ್ಯ’ ಚಲನಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವ ಹಿರಿಯ ನಟ, ಪ್ರಕಾಶ ಬೆಳವಾಡಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಪ್ರಕಾಶ ಬೆಳವಾಡಿ ಧ್ವನಿ 60 ನಿಮಿಷಗಳು

<><><>

ಇಂದಿನಿಂದ, 2026 ಜನೆವರಿ 8ರ ವರೆಗೆ, ಝಾನ್ಸಿಯ ವೀರಾಂಗನಾ ರಾಣಿ ಲಕ್ಷ್ಮೀಬಾಯಿ ರೈಲು ನಿಲ್ದಾಣದ, ಪ್ಲಾಟ್ ಫಾರ್ಮ ಸಂಖ್ಯೆ 3 ರಲ್ಲಿ, ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯಲಿದ್ದು, ರೈಲು ಸಂಖ್ಯೆ 05074

ಲಾಲ್ಕುವಾ–ಕೆ.ಎಸ್.ಆರ್ ಬೆಂಗಳೂರು, ವೀಕ್ಲಿ ಎಕ್ಸಪ್ರೆಸ್, ರೈಲು ಸೇವೆ ರದ್ದು ಪಡಿಸಲಾಗಿದೆ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲು ನಿಲ್ದಾಣದಿಂದ ಹೊರಡುವ, ಎಸ್.ಎಸ್.ಎಸ್. – ಯೋಗ ನಗರಿ, ಹೃಷಿಕೇಶ ವೀಕ್ಲಿ ಎಕ್ಸಪ್ರೆಸ್ ರೈಲು, **2026** ರ ಜನವರಿ **5**ರ ವರೆಗೆ ಹಾಗೂ ಯೋಗ ನಗರಿ ಹೃಷಿಕೇಶ–ಎಸ್.ಎಸ್.ಎಸ್ ಹುಬ್ಬಳ್ಳಿ ವೀಕ್ಲಿ ಎಕ್ಸ್‌ಪ್ರೆಸ್ ರೈಲು ಸೇವೆ, **2026**ರ, ಜನೆವರಿ **8**ರ ವರೆಗೆ ರದ್ದು ಪಡಿಸಲಾಗಿದೆ. **27** ಹಾಗೂ **29** ಯಶವಂತಪುರ–ಯೋಗ ನಗರಿ ಹೃಷಿಕೇಶ ಎಕ್ಸ್‌ಪ್ರೆಸ್ ರೈಲು ಸೇವೆ ಹಾಗೂ ಯೋಗ ನಗರಿ ಹೃಷಿಕೇಶ–ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ ವಿಶೇ ' ರೈಲು ಸೇವೆಗಳನ್ನು ಸಹ, ರದ್ದು ಪಡಿಸಲಾಗಿದೆ ಎಂದು, ನೈಋತ್ಯ ರೇಲ್ವೆ ಪ್ರಕಟಣೆ ತಿಳಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳಿಗೆ, ಕೇಂದ್ರದ ಅಧಿಸೂಚನೆ; ವಿವಿಧ ವಲಯಗಳ ಕಾರ್ಮಿಕರ ಹಿತ ಕಾಯಲು, ಮಹತ್ವದ ಹೆಜ್ಜೆ.

'ಒಂದು ರಾಷ್ಟ್ರ, ಒಂದು ಚುನಾವಣೆ'; ಗದಗ ನಲ್ಲಿ, ವಿಶೇಷ ವಿಚಾರ ಸಂಕಿರಣ, ಸಂಪನ್ನ.
ಸ್ಥಳೀಯ ಆರ್ಥಿಕತೆ ವೇಗವರ್ಧನೆಗೆ, ಲೀಪ್ ಯೋಜನೆ; ಕಲಬುರಗಿಯಲ್ಲಿ ನೂತನ ನವೋದ್ಯಮ ಕೇಂದ್ರ, ಜನೆವರಿಗೆ ಕಾರ್ಯಾರಂಭ.

ಮಹಿಳೆಯರ ವಿರುದ್ಧದ ದೌರ್ಜನ್ಯ ತಡೆ, ಅಂತಾರಾಷ್ಟ್ರೀಯ ದಿನಾಚರಣೆ; ಇಂದು ವಿವಿಧೆಡೆ, ಅರ್ಥಪೂರ್ಣ ಕಾರ್ಯಕ್ರಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ **7** ಗಂಟೆ **35** ನಿಮಿಷಕ್ಕೆ

<><><>